INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -03,May-June, 2026
Page No,89-100
Peer -Reviewed, Refereed Journal

# ಸ್ವಾತಂತ್ರ್ಯ ಚಳುವಳಿಯಲ್ಲಿ ಹಳೆಯ ಮೈಸೂರು ರಾಜ್ಯದ ಕೊಡುಗೆ ಕುರಿತ ವಿಶ್ಲೇಷಣೆ

**ಡಾ.ಶೋಭಾ.ಹೆಚ್.ಎಲ್**[1]

**ಸಾರಾಂಶ:–**ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಹಳೆಯ ಮೈಸೂರು ರಾಜ್ಯವು ಮಹತ್ವದ ಮತ್ತು ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ. ಬ್ರಿಟಿಷರ ಅಧೀನ ಸಂಸ್ಥಾನವಾಗಿದ್ದರೂ ಮೈಸೂರು ರಾಜ್ಯದಲ್ಲಿ ರಾಷ್ಟ್ರೀಯ ಚೇತನ, ರಾಜಕೀಯ ಜಾಗೃತಿ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳು ಕ್ರಮೇಣ ಬೆಳವಣಿಗೆಯಾದವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ತತ್ವಗಳು ಮತ್ತು ಚಳವಳಿಗಳ ಪ್ರಭಾವದಿಂದ ಮೈಸೂರು ರಾಜ್ಯದ ಜನರು ಸ್ವರಾಜ್ಯ, ಜನಪ್ರತಿನಿಧಿತ್ವ ಮತ್ತು ನಾಗರಿಕ ಹಕ್ಕುಗಳಿಗಾಗಿ ಹೋರಾಟ ನಡೆಸಿದರು. ಅಸಹಕಾರ ಚಳವಳಿ, ನಾಗರಿಕ ಕಾಯಿದೆ ಭಂಗ ಚಳುವಳಿ ಹಾಗೂ ಭಾರತ ಬಿಟ್ಟು ತೊಲಗಿ ಚಳವಳಿಗಳ ಪ್ರಭಾವ ಮೈಸೂರು ರಾಜ್ಯದಲ್ಲಿಯೂ ಗೋಚರಿಸಿತು. ಮೈಸೂರು ಕಾಂಗ್ರೆಸ್ ಸಂಘಟನೆಯು ಜನರನ್ನು ಸಂಘಟಿಸಿ ಜವಾಬ್ದಾರಿಯುತ ಸರ್ಕಾರದ ಸ್ಥಾಪನೆಗಾಗಿ ನಿರಂತರ ಹೋರಾಟ ನಡೆಸಿತು. 1938ರ ಶಿವಪುರ ಧ್ವಜ ಸತ್ಯಾಗ್ರಹ ಮತ್ತು ಮೈಸೂರು ಚಲೋ ಚಳವಳಿಗಳು ಮೈಸೂರು ರಾಜ್ಯದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟ್ಟಗಳಾಗಿ ಗುರುತಿಸಲ್ಪಟ್ಟಿವೆ. ಈ ಚಳುವಳಿಗಳು ಜನರಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಬಲಪಡಿಸುವುದರ ಜೊತೆಗೆ ಪ್ರಜಾಪ್ರಭುತ್ವದ ಆಶಯಗಳನ್ನು ಗಟ್ಟಿಗೊಳಿಸಿದವು. ಕೆ.ಸಿ.ರೆಡ್ಡಿ, ಟಿ.ಸಿದ್ದಲಿಂಗಯ್ಯ, ಎಚ್.ಸಿ.ದಾಸಪ್ಪ, ಕೆಂಗಲ್ ಹನುಮಂತಯ್ಯ ಅವರಂತಹ ನಾಯಕರು ಮೈಸೂರು ರಾಜ್ಯದ ರಾಜಕೀಯ ಚಳವಳಿಗಳಿಗೆ ದಿಕ್ಕುನೀಡಿ ಸ್ವಾತಂತ್ರ್ಯ ಹೋರಾಟವನ್ನು ಬಲಪಡಿಸಿದರು. ಕನ್ನಡ ಪತ್ರಿಕೆಗಳು, ಸಾಹಿತ್ಯಕರು, ಶಿಕ್ಷಣ ಸಂಸ್ಥೆಗಳು ಹಾಗೂ ಸಮಾಜ ಸುಧಾರಣಾ ಚಳವಳಿಗಳು ರಾಷ್ಟ್ರೀಯ ಜಾಗೃತಿಯನ್ನು ಜನಸಾಮಾನ್ಯರ ನಡುವೆ ಹರಡುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಸ್ವಾತಂತ್ರ್ಯಾನಂತರ ಮೈಸೂರು ಸಂಸ್ಥಾನವು ಶಾಂತಿಯುತವಾಗಿ ಭಾರತೀಯ ಒಕ್ಕೂಟದಲ್ಲಿ ವಿಲೀನಗೊಂಡು ರಾಷ್ಟ್ರದ ಏಕೀಕರಣಕ್ಕೆ ಸಹಕಾರ ನೀಡಿತು.

**ಪ್ರಮುಖ ಪದಗಳು:** ಸ್ವಾತಂತ್ರ್ಯ ಚಳುವಳಿ, ಹಳೆಯ ಮೈಸೂರು ರಾಜ್ಯ, ರಾಷ್ಟ್ರೀಯ ಚಳವಳಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಮೈಸೂರು ಕಾಂಗ್ರೆಸ್, ಜವಾಬ್ದಾರಿಯುತ ಸರ್ಕಾರ, ಶಿವಪುರ ಧ್ವಜ

---

[1].ಸಹಪ್ರಾಧ್ಯಾಪಕರು,ಇತಿಹಾಸ ವಿಭಾಗ, ಶ್ರೀಡಿ,ದೇವರಾಜಅರಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.

ಸತ್ಯಾಗ್ರಹ, ಮೈಸೂರು ಚಲೋ ಚಳುವಳಿ, ಪ್ರಜಾಪ್ರಭುತ್ವ, ಸ್ವರಾಜ್ಯ, ನಾಗರಿಕ ಹಕ್ಕುಗಳು, ಅಸಹಕಾರ ಚಳವಳಿ, ನಾಗರಿಕ ಕಾಯಿದೆ ಭಂಗ ಚಳುವಳಿ, ಖಾದಿ ಮತ್ತು ಸ್ವದೇಶಿ, ರಾಷ್ಟ್ರೀಯ ಜಾಗೃತಿ, ಭಾರತೀಯ ಒಕ್ಕೂಟ, ರಾಷ್ಟ್ರ ಏಕೀಕರಣ.

**ಪೀಠಿಕೆ**

ಭಾರತದ ಸ್ವಾತಂತ್ರ್ಯ ಚಳುವಳಿಯು ವಿಶ್ವ ಇತಿಹಾಸದಲ್ಲಿಯೇ ಅತ್ಯಂತ ವ್ಯಾಪಕ, ಸಂಘಟಿತ ಹಾಗೂ ಜನಪರ ರಾಷ್ಟ್ರೀಯ ವಿಮೋಚನಾ ಹೋರಾಟಗಳಲ್ಲಿ ಒಂದಾಗಿದೆ. ಈ ಚಳವಳಿಯು ಕೇವಲ ಬ್ರಿಟಿಷರ ನೇರ ಆಡಳಿತದ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರದೆ, ದೇಶದ ವಿವಿಧ ಸಂಸ್ಥಾನಗಳಲ್ಲಿಯೂ ರಾಷ್ಟ್ರೀಯ ಚೇತನೆಯನ್ನು ಮೂಡಿಸಿ ಜನರಲ್ಲಿ ಸ್ವಾತಂತ್ರ್ಯ, ಸ್ವರಾಜ್ಯ ಮತ್ತು ಪ್ರಜಾಪ್ರಭುತ್ವದ ಆಶಯಗಳನ್ನು ಬಿತ್ತಿತು. ವಸಾಹತುಶಾಹಿ ಆಡಳಿತದ ವಿರುದ್ಧ ನಡೆದ ಈ ಹೋರಾಟವು ರಾಜಕೀಯ ಸ್ವಾತಂತ್ರ್ಯವನ್ನು ಪಡೆಯುವ ಗುರಿಯ ಜೊತೆಗೆ ಸಾಮಾಜಿಕ ನ್ಯಾಯ, ನಾಗರಿಕ ಹಕ್ಕುಗಳು, ಸಮಾನತೆ ಮತ್ತು ಜನಪ್ರತಿನಿಧಿತ್ವದ ಮೌಲ್ಯಗಳನ್ನು ಸ್ಥಾಪಿಸುವ ಉದ್ದೇಶವನ್ನೂ ಹೊಂದಿತ್ತು. ಈ ಹಿನ್ನೆಲೆಯಲ್ಲಿ ಭಾರತದ ವಿವಿಧ ಸಂಸ್ಥಾನಗಳು ರಾಷ್ಟ್ರೀಯ ಚಳುವಳಿಯ ಪ್ರಮುಖ ಕೇಂದ್ರಗಳಾಗಿ ರೂಪುಗೊಂಡವು. ದಕ್ಷಿಣ ಭಾರತದ ಪ್ರಮುಖ ಮತ್ತು ಪ್ರಗತಿಪರ ಸಂಸ್ಥಾನಗಳಲ್ಲಿ ಒಂದಾಗಿದ್ದ ಮೈಸೂರು ಸಂಸ್ಥಾನವು ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿತು. ಒಡೆಯರ್ ಆಡಳಿತದಲ್ಲಿದ್ದ ಮೈಸೂರು ರಾಜ್ಯವು ಶಿಕ್ಷಣ, ಕೈಗಾರಿಕೆ, ಕೃಷಿ, ಆಡಳಿತ ಮತ್ತು ಸಾರ್ವಜನಿಕ ಸೇವೆಗಳ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿತ್ತು. ಆದಾಗ್ಯೂ, ಆಡಳಿತದಲ್ಲಿ ಜನರ ನೇರ ಪಾಲ್ಗೊಳ್ಳುವಿಕೆಯ ಕೊರತೆ, ಜವಾಬ್ದಾರಿಯುತ ಸರ್ಕಾರದ ಅಭಾವ ಮತ್ತು ನಾಗರಿಕ ಹಕ್ಕುಗಳ ಮೇಲಿನ ನಿರ್ಬಂಧಗಳು ಜನರಲ್ಲಿ ಅಸಮಾಧಾನವನ್ನು ಉಂಟುಮಾಡಿದವು. ಇದರಿಂದಾಗಿ ಜನಪ್ರತಿನಿಧಿತ್ವ, ಸಂವಿಧಾನಬದ್ಧ ಆಡಳಿತ ಮತ್ತು ಪ್ರಜಾಪ್ರಭುತ್ವದ ವ್ಯವಸ್ಥೆಗಾಗಿ ಬೇಡಿಕೆಗಳು ಕ್ರಮೇಣ ಬಲಗೊಳ್ಳತೊಡಗಿದವು.

ಇಪ್ಪತ್ತನೇ ಶತಮಾನದ ಆರಂಭದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬೆಳವಣಿಗೆ, ರಾಷ್ಟ್ರೀಯ ಚಳುವಳಿಯ ವಿಸ್ತರಣೆ ಹಾಗೂ ಮಹಾತ್ಮ ಗಾಂಧೀಜಿ ಅವರ ನಾಯಕತ್ವದಲ್ಲಿ ನಡೆದ ಅಸಹಕಾರ, ನಾಗರಿಕ ಕಾಯಿದೆ ಭಂಗ ಮತ್ತು ಭಾರತ ಬಿಟ್ಟು ತೊಲಗಿ ಚಳುವಳಿಗಳ ಪ್ರಭಾವ ಮೈಸೂರು ರಾಜ್ಯದಲ್ಲಿಯೂ ಕಂಡುಬಂದಿತು. ಸ್ವದೇಶಿ, ಖಾದಿ, ರಾಷ್ಟ್ರೀಯ ಶಿಕ್ಷಣ ಮತ್ತು ಸಾಮಾಜಿಕ ಸುಧಾರಣೆಯ ವಿಚಾರಗಳು ಮೈಸೂರು ಜನರಲ್ಲಿ ಹೊಸ ರಾಜಕೀಯ ಜಾಗೃತಿಯನ್ನು ಮೂಡಿಸಿದವು. ಈ ಬೆಳವಣಿಗೆಗಳ ಪರಿಣಾಮವಾಗಿ ಮೈಸೂರು ರಾಜ್ಯದಲ್ಲಿ ರಾಷ್ಟ್ರೀಯತೆಯ ಭಾವನೆ ಬಲಗೊಂಡು ಜನರು ಸ್ವಾತಂತ್ರ್ಯ ಮತ್ತು ಜನತಾಂತ್ರಿಕ ಹಕ್ಕುಗಳಿಗಾಗಿ ಸಂಘಟಿತರಾದರು. ಮೈಸೂರು ರಾಜ್ಯ ಕಾಂಗ್ರೆಸ್‌ನ ಸ್ಥಾಪನೆಯು ಈ

ರಾಜಕೀಯ ಜಾಗೃತಿಗೆ ಸಂಘಟಿತ ರೂಪವನ್ನು ನೀಡಿತು. ಈ ಸಂಘಟನೆಯು ಜನರನ್ನು ರಾಜಕೀಯವಾಗಿ ಸಜ್ಜುಗೊಳಿಸಿ ಜವಾಬ್ದಾರಿಯುತ ಸರ್ಕಾರದ ಸ್ಥಾಪನೆಗಾಗಿ ಹೋರಾಟ ನಡೆಸಿತು. 1938ರ ಶಿವಪುರ ಧ್ವಜ ಸತ್ಯಾಗ್ರಹವು ಮೈಸೂರು ರಾಜ್ಯದ ರಾಷ್ಟ್ರೀಯ ಚಳುವಳಿಯ ಇತಿಹಾಸದಲ್ಲಿ ಮಹತ್ವದ ತಿರುವಾಗಿದ್ದು, ರಾಷ್ಟ್ರೀಯ ಧ್ವಜದ ಗೌರವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ಸಂಕೇತವಾಗಿ ಉಳಿದಿದೆ. ಅದೇ ರೀತಿ ಮೈಸೂರು ಚಲೋ ಚಳುವಳಿಯು ಪ್ರಜಾಪ್ರಭುತ್ವ ಮತ್ತು ಜನಪ್ರತಿನಿಧಿತ್ವಕ್ಕಾಗಿ ನಡೆದ ಜನಾಂದೋಲನವಾಗಿ ಮೈಸೂರು ರಾಜ್ಯದ ರಾಜಕೀಯ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಈ ಹೋರಾಟಗಳಲ್ಲಿ ಕೆ.ಸಿ.ರೆಡ್ಡಿ, ಎಚ್.ಸಿ.ದಾಸಪ್ಪ, ಕೆಂಗಲ್ ಹನುಮಂತಯ್ಯ, ಟಿ.ಸಿದ್ದಲಿಂಗಯ್ಯ ಅವರು ಸೇರಿದಂತೆ ಅನೇಕ ನಾಯಕರು ಪ್ರಮುಖ ಪಾತ್ರ ವಹಿಸಿದರು. ಅವರು ಜನರಲ್ಲಿ ರಾಷ್ಟ್ರೀಯತೆ, ಸ್ವಾಭಿಮಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸುವ ಕಾರ್ಯದಲ್ಲಿ ತೊಡಗಿಸಿಕೊಂಡರು. ಇದರ ಜೊತೆಗೆ ಕನ್ನಡ ಪತ್ರಿಕೆಗಳು, ಸಾಹಿತ್ಯಿಕರು, ವಿದ್ಯಾರ್ಥಿ ಸಂಘಟನೆಗಳು, ಸಾಮಾಜಿಕ ಸುಧಾರಕರು ಹಾಗೂ ಮಹಿಳಾ ಸಂಘಟನೆಗಳು ರಾಷ್ಟ್ರೀಯ ಚಳುವಳಿಯ ವಿಚಾರಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಮಹತ್ವದ ಸೇವೆ ಸಲ್ಲಿಸಿದವು. ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕ ವೇದಿಕೆಗಳು ರಾಷ್ಟ್ರೀಯ ಚಿಂತನೆಗಳ ಪ್ರಸಾರಕ್ಕೆ ಪರಿಣಾಮಕಾರಿ ಮಾಧ್ಯಮಗಳಾಗಿ ಕಾರ್ಯನಿರ್ವಹಿಸಿದವು. ಸ್ವಾತಂತ್ರ್ಯ ಚಳುವಳಿಯಲ್ಲಿ ಹಳೆಯ ಮೈಸೂರು ರಾಜ್ಯದ ಪಾತ್ರವನ್ನು ಅಧ್ಯಯನ ಮಾಡುವುದರಿಂದ ಭಾರತೀಯ ರಾಷ್ಟ್ರೀಯ ಚಳುವಳಿಯ ಪ್ರಾದೇಶಿಕ ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ, ಕರ್ನಾಟಕದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆ, ಜನಪರ ಆಡಳಿತದ ಸ್ಥಾಪನೆ, ರಾಜಕೀಯ ಜಾಗೃತಿ ಮತ್ತು ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯಲ್ಲಿ ಮೈಸೂರು ರಾಜ್ಯದ ಕೊಡುಗೆಯನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡಲು ಸಹಾಯಕವಾಗುತ್ತದೆ.

ಮೈಸೂರು ಸಂಸ್ಥಾನವು ದಕ್ಷಿಣ ಭಾರತದ ಪ್ರಮುಖ ಸಂಸ್ಥಾನಗಳಲ್ಲಿ ಒಂದಾಗಿದ್ದು, ಒಡೆಯರ್ ಅರಸರ ಆಡಳಿತದ ಅಡಿಯಲ್ಲಿ ಬೆಳವಣಿಗೆಯನ್ನು ಕಂಡ ರಾಜ್ಯವಾಗಿತ್ತು. 1799ರಲ್ಲಿ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ಅನಂತರ ಟಿಪ್ಪು ಸುಲ್ತಾನರ ಪತನವಾಗಿದ್ದು, ಬ್ರಿಟಿಷರು ಮೈಸೂರು ಸಂಸ್ಥಾನದ ಮೇಲೆ ತಮ್ಮ ಪ್ರಭಾವವನ್ನು ಸ್ಥಾಪಿಸಿದರು. ಅನಂತರ ಒಡೆಯರ್ ವಂಶದ ಆಡಳಿತವನ್ನು ಪುನಃಸ್ಥಾಪಿಸಿದರೂ, ಮೈಸೂರು ಸಂಸ್ಥಾನವು ಬ್ರಿಟಿಷರ ಪರಮಾಧಿಕಾರದ ಅಧೀನದಲ್ಲಿರುವ ಸಂಸ್ಥಾನವಾಗಿ ಕಾರ್ಯನಿರ್ವಹಿಸಬೇಕಾಯಿತು. 1881ರಲ್ಲಿ ಅದಿಕಾರವನ್ನು ಒಪ್ಪಿಸುವ ಮೂಲಕ ಮೈಸೂರು ಆಡಳಿತವನ್ನು ಮಹಾರಾಜ ಹತ್ತನೆಯ ಚಾಮರಾಜ ಒಡೆಯರ್ ಅವರ ನೇತೃತ್ವದಲ್ಲಿ ಪುನಃ ಒಡೆಯರ್ ವಂಶಕ್ಕೆ ಹಸ್ತಾಂತರಿಸಲಾಯಿತು. ಅನಂತರದ ಅವಧಿಯಲ್ಲಿ ದಿವಾನರಾದ ಸರ್ ಕೆ.ಶೇಷಾದ್ರಿ ಅಯ್ಯರ್,

ಸರ್ ಎಂ.ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಅವರ ಆಡಳಿತದಲ್ಲಿ ರಾಜ್ಯವು ಆಧುನಿಕ ಅಭಿವೃದ್ಧಿಯತ್ತ ಮುನ್ನಡೆಯಿತು. ಶಿಕ್ಷಣ, ಕೈಗಾರಿಕೆ, ನೀರಾವರಿ, ವಿದ್ಯುತ್, ಸಾರಿಗೆ ಮತ್ತು ಆಡಳಿತ ವ್ಯವಸ್ಥೆಗಳಲ್ಲಿ ಹಲವಾರು ಸುಧಾರಣೆಗಳನ್ನು ಜಾರಿಗೊಳಿಸಲಾಯಿತು. ಆದಾಗ್ಯೂ, ಈ ಅಭಿವೃದ್ಧಿಯ ನಡುವೆಯೂ ರಾಜ್ಯದಲ್ಲಿ ಸಂಪೂರ್ಣ ಜನತಾಂತ್ರಿಕ ವ್ಯವಸ್ಥೆ ಅಸ್ತಿತ್ವದಲ್ಲಿರಲಿಲ್ಲ. ಆಡಳಿತದ ಪ್ರಮುಖ ನಿರ್ಧಾರಗಳು ಮಹಾರಾಜರು ಮತ್ತು ಅಧಿಕಾರಿಗಳ ಕೈಯಲ್ಲೇ ಕೇಂದ್ರೀಕೃತವಾಗಿದ್ದವು. ಜನರಿಗೆ ಮತದಾನದ ಹಕ್ಕು, ಪ್ರತಿನಿಧಿ ಆಡಳಿತ ಮತ್ತು ಆಡಳಿತದ ಮೇಲಿನ ಪರಿಣಾಮಕಾರಿ ನಿಯಂತ್ರಣದ ಅವಕಾಶಗಳು ಸೀಮಿತವಾಗಿದ್ದವು. ಪ್ರಜಾಪ್ರತಿನಿಧಿ ಸಭೆ ಮತ್ತು ವಿಧಾನ ಪರಿಷತ್ತಿನಂತಹ ಸಂಸ್ಥೆಗಳು ಸ್ಥಾಪನೆಯಾಗಿದ್ದರೂ ಅವುಗಳಿಗೆ ಸಂಪೂರ್ಣ ಶಾಸನಾತ್ಮಕ ಅಧಿಕಾರಗಳಿರಲಿಲ್ಲ. ಈ ಕಾರಣದಿಂದಾಗಿ ವಿದ್ಯಾವಂತ ವರ್ಗ, ವಿದ್ಯಾರ್ಥಿಗಳು, ಪತ್ರಕರ್ತರು ಹಾಗೂ ಸಮಾಜ ಸುಧಾರಕರಲ್ಲಿ ರಾಜಕೀಯ ಅಸಮಾಧಾನ ಬೆಳೆಯತೊಡಗಿತು. 19ನೇ ಶತಮಾನದ ಅಂತ್ಯ ಮತ್ತು 20ನೇ ಶತಮಾನದ ಆರಂಭದಲ್ಲಿ ಶಿಕ್ಷಣದ ವ್ಯಾಪಕ ವಿಸ್ತರಣೆ ಹಾಗೂ ಮುದ್ರಣ ಮತ್ತು ಪತ್ರಿಕೋದ್ಯಮದ ಬೆಳವಣಿಗೆಯಿಂದ ರಾಜಕೀಯ ಜಾಗೃತಿ ಹೆಚ್ಚಾಯಿತು.

ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳು ರಾಷ್ಟ್ರೀಯತೆಯ ವಿಚಾರಗಳನ್ನು ಜನರಿಗೆ ತಲುಪಿಸಿದವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆ, ಸ್ವದೇಶಿ ಚಳುವಳಿ, ಬೆಂಗಾಳ ವಿಭಜನೆ ವಿರೋಧಿ ಹೋರಾಟ ಹಾಗೂ ಗಾಂಧೀಜಿ ಅವರ ರಾಷ್ಟ್ರೀಯ ಚಳುವಳಿಗಳ ಪ್ರಭಾವ ಮೈಸೂರು ರಾಜ್ಯದ ಜನತೆಯ ಮೇಲೂ ಬೀರಿತು. ಇದರಿಂದ ರಾಷ್ಟ್ರೀಯತೆ, ಸ್ವರಾಜ್ಯ, ಜನಪ್ರತಿನಿಧಿತ್ವ ಮತ್ತು ಜವಾಬ್ದಾರಿಯುತ ಸರ್ಕಾರದ ಕುರಿತು ಜನರಲ್ಲಿ ಅರಿವು ಮೂಡಿತು. ಮೈಸೂರು ರಾಜ್ಯದಲ್ಲಿ ಬೆಳೆಯುತ್ತಿದ್ದ ಈ ರಾಜಕೀಯ ಜಾಗೃತಿಯು ಕ್ರಮೇಣ ಸಂಘಟಿತ ಚಳುವಳಿಗಳ ರೂಪವನ್ನು ಪಡೆಯಿತು. ವಿದ್ಯಾರ್ಥಿ ಸಂಘಟನೆಗಳು, ಸಾರ್ವಜನಿಕ ಸಭೆಗಳು, ಪತ್ರಿಕೆಗಳು ಮತ್ತು ರಾಜಕೀಯ ಸಂಘಟನೆಗಳು ಜನರನ್ನು ಪ್ರಜಾಪ್ರಭುತ್ವದ ಹಕ್ಕುಗಳಿಗಾಗಿ ಹೋರಾಡಲು ಪ್ರೇರೇಪಿಸಿದವು. ಇದರ ಪರಿಣಾಮವಾಗಿ ಮೈಸೂರು ಕಾಂಗ್ರೆಸ್ ಸಂಘಟನೆಯು ಉದಯಿಸಿ, ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರ ಹಾಗೂ ನಾಗರಿಕ ಹಕ್ಕುಗಳಿಗಾಗಿ ಹೋರಾಟ ನಡೆಸಿತು.

1885ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಸ್ಥಾಪನೆಯಾದುದು ಭಾರತೀಯ ರಾಷ್ಟ್ರೀಯ ಚಳುವಳಿಯ ಇತಿಹಾಸದಲ್ಲಿ ಮಹತ್ವದ ತಿರುವನ್ನು ಉಂಟುಮಾಡಿತು. ಕಾಂಗ್ರೆಸ್ ಆರಂಭದಲ್ಲಿ ವಿದ್ಯಾವಂತ ಭಾರತೀಯರ ರಾಜಕೀಯ ವೇದಿಕೆಯಾಗಿದ್ದರೂ, ಕ್ರಮೇಣ ಅದು ದೇಶವ್ಯಾಪಿ ರಾಷ್ಟ್ರೀಯ ಚಳುವಳಿಯ ಪ್ರಮುಖ ಸಂಘಟನೆಯಾಗಿ ರೂಪುಗೊಂಡಿತು. ಈ ಮೂಲಕ ರಾಷ್ಟ್ರೀಯ ಚಳುವಳಿಯ ವಿಚಾರಗಳು ಮೈಸೂರು ರಾಜ್ಯದ ಜನತೆಗೆ ತಲುಪಿದವು. ಕಾಂಗ್ರೆಸ್‌ನ ವೇದಿಕೆಯ ಮೂಲಕ ಸ್ವಾತಂತ್ರ್ಯ,

ಸ್ವರಾಜ್ಯ, ರಾಜಕೀಯ ಸಮಾನತೆ ಹಾಗೂ ಜನಪ್ರತಿನಿಧಿತ್ವದ ಪರಿಕಲ್ಪನೆಗಳು ಮೈಸೂರು ರಾಜ್ಯದಲ್ಲಿ ವ್ಯಾಪಕವಾಗಿ ಚರ್ಚೆಗೆ ಒಳಪಟ್ಟವು. 1905ರ ಬೆಂಗಾಳ ವಿಭಜನೆ ವಿರೋಧಿ ಚಳುವಳಿ, ಸ್ವದೇಶಿ ಚಳುವಳಿ ಹಾಗೂ ಅನಂತರದ ರಾಷ್ಟ್ರೀಯ ಹೋರಾಟಗಳು ಮೈಸೂರು ರಾಜ್ಯದ ಜನರ ಮೇಲೆ ಪ್ರಭಾವ ಬೀರಿದವು. ವಿದೇಶಿ ವಸ್ತುಗಳ ಬಹಿಷ್ಕಾರ, ಖಾದಿಯ ಬಳಕೆ ಮತ್ತು ರಾಷ್ಟ್ರೀಯ ಶಿಕ್ಷಣದಂತಹ ಕಾರ್ಯಕ್ರಮಗಳು ಮೈಸೂರು ರಾಜ್ಯದಲ್ಲಿಯೂ ಜನಪ್ರಿಯವಾದವು. ಮಹಾತ್ಮ ಗಾಂಧೀಜಿ ಅವರ ನೇತೃತ್ವದಲ್ಲಿ ನಡೆದ ಅಸಹಕಾರ ಚಳುವಳಿ, ನಾಗರಿಕ ಕಾಯಿದೆ ಭಂಗ ಚಳುವಳಿ ಹಾಗೂ ಭಾರತ ಬಿಟ್ಟು ತೊಲಗಿ ಚಳುವಳಿಗಳ ಪರಿಣಾಮ ಮೈಸೂರು ರಾಜ್ಯದಲ್ಲಿಯೂ ಸ್ಪಷ್ಟವಾಗಿ ಕಂಡುಬಂತು. ಗಾಂಧೀಜಿ ಅವರ ಸತ್ಯಾಗ್ರಹ, ಅಹಿಂಸೆ ಮತ್ತು ಸ್ವದೇಶಿ ತತ್ವಗಳು ಮೈಸೂರು ಜನರಲ್ಲಿ ರಾಷ್ಟ್ರಪ್ರೇಮ ಮತ್ತು ರಾಜಕೀಯ ಜಾಗೃತಿಯನ್ನು ಹೆಚ್ಚಿಸಿತು. ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಮತ್ತು ಸಮಾಜ ಸುಧಾರಕರು ರಾಷ್ಟ್ರೀಯ ಚಳುವಳಿಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಆರಂಭಿಸಿದರು. ಕಾಂಗ್ರೆಸ್‌ನ ಪ್ರಭಾವದಿಂದ ಮೈಸೂರು ರಾಜ್ಯದಲ್ಲಿ ಜನಪ್ರತಿನಿಧಿತ್ವ ಮತ್ತು ಜವಾಬ್ದಾರಿಯುತ ಸರ್ಕಾರದ ಬೇಡಿಕೆಗಳು ಬಲಗೊಂಡವು.

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮಹಾತ್ಮ ಗಾಂಧೀಜಿ ಅವರ ನೇತೃತ್ವದಲ್ಲಿ 1920–1922 ನಡೆದ ಅಸಹಕಾರ ಚಳುವಳಿಯು ಒಂದು ಮಹತ್ವದ ಘಟ್ಟವಾಗಿದೆ. ಈ ಅಸಹಕಾರ ಚಳುವಳಿಯ ತತ್ವಗಳು ಮೈಸೂರು ರಾಜ್ಯದ ವಿದ್ಯಾರ್ಥಿಗಳು, ಶಿಕ್ಷಕರು, ವಕೀಲರು, ಪತ್ರಕರ್ತರು ಹಾಗೂ ಯುವಜನರಲ್ಲಿ ರಾಷ್ಟ್ರಪ್ರೇಮ ಮತ್ತು ಸ್ವಾತಂತ್ರ್ಯದ ಚೇತನೆಯನ್ನು ಬೆಳೆಸಿದವು. ಅನೇಕ ವಿದ್ಯಾರ್ಥಿಗಳು ರಾಷ್ಟ್ರೀಯ ಚಳುವಳಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಾರ್ವಜನಿಕ ಸಭೆಗಳು, ಜಾಗೃತಿ ಅಭಿಯಾನಗಳು ಮತ್ತು ಸ್ವದೇಶಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡರು. ಈ ಚಳುವಳಿಯ ಪ್ರಮುಖ ಪರಿಣಾಮಗಳಲ್ಲಿ ಖಾದಿಯ ಪ್ರಚಾರ ಪ್ರಮುಖವಾಗಿದೆ. ಗಾಂಧೀಜಿ ಅವರ ಸ್ವದೇಶಿ ತತ್ವದಿಂದ ಪ್ರೇರಿತರಾದ ಮೈಸೂರು ರಾಜ್ಯದ ಜನರು ಖಾದಿ ಧರಿಸುವುದನ್ನು ರಾಷ್ಟ್ರೀಯ ಕರ್ತವ್ಯವೆಂದು ಪರಿಗಣಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಚರಖಾ ಚಳುವಳಿ ವಿಸ್ತಾರಗೊಂಡು ಸ್ಥಳೀಯ ಉತ್ಪನ್ನಗಳ ಬಳಕೆಗೆ ಉತ್ತೇಜನ ದೊರೆಯಿತು. ಖಾದಿಯು ಕೇವಲ ಒಂದು ವಸ್ತ್ರವಲ್ಲ, ಸ್ವಾವಲಂಬನೆ ಮತ್ತು ರಾಷ್ಟ್ರಪ್ರೇಮದ ಸಂಕೇತವಾಗಿ ರೂಪುಗೊಂಡಿತು. ಅದೇ ರೀತಿ ವಿದೇಶಿ ವಸ್ತುಗಳ ಬಹಿಷ್ಕಾರಕ್ಕೂ ಮೈಸೂರು ರಾಜ್ಯದಲ್ಲಿ ಉತ್ತಮ ಪ್ರತಿಕ್ರಿಯೆ ದೊರೆಯಿತು. ವ್ಯಾಪಾರಿಗಳು ಮತ್ತು ಸಾರ್ವಜನಿಕರು ಬ್ರಿಟಿಷ್ ಉತ್ಪನ್ನಗಳ ಬಳಕೆಯನ್ನು ಕಡಿಮೆ ಮಾಡಿ ಸ್ವದೇಶಿ ವಸ್ತುಗಳ ಬಳಕೆಗೆ ಆದ್ಯತೆ ನೀಡಿದರು. ವಿವಿಧ ಕಡೆಗಳಲ್ಲಿ ವಿದೇಶಿ ಬಟ್ಟೆಗಳ ದಹನ ಮತ್ತು ಸ್ವದೇಶಿ ವಸ್ತುಗಳ ಪ್ರಚಾರ ಕಾರ್ಯಕ್ರಮಗಳು ನಡೆದವು. ಈ ಮೂಲಕ ರಾಷ್ಟ್ರೀಯ ಆರ್ಥಿಕತೆಯನ್ನು ಬಲಪಡಿಸುವ ಪ್ರಯತ್ನ ನಡೆಯಿತು. ಅಸಹಕಾರ ಚಳುವಳಿಯು

ಮೈಸೂರು ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣದ ಮಹತ್ವವನ್ನೂ ಹೆಚ್ಚಿಸಿತು. ಶಿಕ್ಷಣದ ಮೂಲಕ ರಾಷ್ಟ್ರಭಕ್ತಿ ಮತ್ತು ಸಾಮಾಜಿಕ ಜಾಗೃತಿಯನ್ನು ಬೆಳೆಸಬೇಕೆಂಬ ಚಿಂತನೆ ಬಲಗೊಂಡಿತು. ವಿದ್ಯಾರ್ಥಿ ಸಂಘಟನೆಗಳು ಮತ್ತು ಯುವಜನ ಸಂಘಗಳು ರಾಷ್ಟ್ರೀಯ ವಿಚಾರಗಳ ಪ್ರಸಾರದಲ್ಲಿ ಪ್ರಮುಖ ಪಾತ್ರವಹಿಸಿದವು.

ಮಹಾತ್ಮ ಗಾಂಧೀಜಿ ಅವರ ನೇತೃತ್ವದ 1930ರಲ್ಲಿ ಆರಂಭವಾದ ನಾಗರಿಕ ಕಾಯಿದೆ ಭಂಗ ಚಳುವಳಿಯು ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಸೃಷ್ಟಿಸಿತು. ಬ್ರಿಟಿಷರ ಅನ್ಯಾಯಕರ ಕಾನೂನುಗಳನ್ನು ಅಹಿಂಸಾತ್ಮಕವಾಗಿ ಉಲ್ಲಂಘಿಸುವ ಮೂಲಕ ಜನರ ಅಸಮಾಧಾನವನ್ನು ವ್ಯಕ್ತಪಡಿಸುವುದು ಈ ಚಳುವಳಿಯ ಮುಖ್ಯ ಉದ್ದೇಶವಾಗಿತ್ತು. ಮೈಸೂರು ರಾಜ್ಯವು ನೇರ ಬ್ರಿಟಿಷ್ ಆಡಳಿತದ ಭಾಗವಾಗಿರದಿದ್ದರೂ, ರಾಷ್ಟ್ರೀಯ ಚಳುವಳಿಯ ಆಶಯಗಳು ಜನರಲ್ಲಿ ತೀವ್ರ ಪ್ರತಿಧ್ವನಿಸಿತು. ವಿದ್ಯಾರ್ಥಿಗಳು, ಯುವಕರು, ಶಿಕ್ಷಕರು, ವಕೀಲರು ಹಾಗೂ ಸಾರ್ವಜನಿಕ ಮುಖಂಡರು ರಾಷ್ಟ್ರೀಯ ಹೋರಾಟಗಳಿಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಮೈಸೂರು ರಾಜ್ಯದ ಅನೇಕ ನಗರಗಳು ಮತ್ತು ಪಟ್ಟಣಗಳಲ್ಲಿ ಸಾರ್ವಜನಿಕ ಸಭೆಗಳು, ಮೆರವಣಿಗೆಗಳು ಹಾಗೂ ಪ್ರತಿಭಟನೆಗಳು ನಡೆಯಿತು. ಈ ಚಳುವಳಿಯ ಪರಿಣಾಮವಾಗಿ ಸ್ವದೇಶಿ ಮತ್ತು ಖಾದಿ ಚಳುವಳಿಗಳಿಗೆ ಮತ್ತಷ್ಟು ಉತ್ತೇಜನ ದೊರೆಯಿತು. ಜನರು ವಿದೇಶಿ ವಸ್ತುಗಳ ಬಹಿಷ್ಕಾರವನ್ನು ಮುಂದುವರಿಸಿ, ಸ್ವದೇಶಿ ಉತ್ಪನ್ನಗಳ ಬಳಕೆಯನ್ನು ಹೆಚ್ಚಿಸಿದರು.

ಖಾದಿ ಧರಿಸುವುದು ರಾಷ್ಟ್ರಪ್ರೇಮದ ಸಂಕೇತವಾಗಿ ಪರಿಗಣಿಸಲ್ಪಟ್ಟಿತು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಚರಖಾ ಚಳುವಳಿ ವಿಸ್ತಾರಗೊಂಡು ಸ್ವಾವಲಂಬನೆಯ ಸಂದೇಶವನ್ನು ಜನರಲ್ಲಿ ಬಿತ್ತರಿಸಿತು. ನಾಗರಿಕ ಕಾಯಿದೆ ಭಂಗ ಚಳುವಳಿಯು ಮೈಸೂರು ರಾಜ್ಯದಲ್ಲಿ ರಾಜಕೀಯ ಜಾಗೃತಿಯನ್ನು ಮತ್ತಷ್ಟು ಗಟ್ಟಿಗೊಳಿಸಿತು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿಯುತ ಸರ್ಕಾರ ಮತ್ತು ಜನಪ್ರತಿನಿಧಿತ್ವದ ಅಗತ್ಯತೆಯನ್ನೂ ಒತ್ತಿಹೇಳಲು ಪ್ರಾರಂಭಿಸಿದರು. ಈ ಅವಧಿಯಲ್ಲಿ ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳು ವಿಶೇಷ ಚಟುವಟಿಕೆಗಳನ್ನು ಕೈಗೊಂಡವು. ರಾಷ್ಟ್ರೀಯ ಹಬ್ಬಗಳ ಆಚರಣೆ, ಧ್ವಜಾರೋಹಣ ಕಾರ್ಯಕ್ರಮಗಳು ಮತ್ತು ಜನಜಾಗೃತಿ ಸಭೆಗಳು ಹೆಚ್ಚಾಗಿದ್ದವು. ಅನೇಕ ನಾಯಕರು ಸಾರ್ವಜನಿಕ ಭಾಷಣಗಳ ಮೂಲಕ ಜನರಲ್ಲಿ ರಾಷ್ಟ್ರಪ್ರೇಮ ಮತ್ತು ಸ್ವರಾಜ್ಯದ ಮಹತ್ವವನ್ನು ವಿವರಿಸಿದರು. ಈ ಚಟುವಟಿಕೆಗಳು ಮೈಸೂರು ರಾಜ್ಯದ ರಾಜಕೀಯ ಚೇತನೆಯನ್ನು ಹೊಸ ಮಟ್ಟಕ್ಕೆ ಕೊಂಡೊಯ್ದವು.

1940ರ ದಶಕವು ಮೈಸೂರು ಸಂಸ್ಥಾನದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟ್ಟವಾಗಿದೆ. ಮೈಸೂರು ರಾಜ್ಯದಲ್ಲಿಯೂ ಪ್ರಜಾಪ್ರಭುತ್ವ ಮತ್ತು ಜನಪ್ರತಿನಿಧಿತ್ವದ ಬೇಡಿಕೆಗಳು ಬಲವಾಗಿ ವ್ಯಕ್ತವಾಗತೊಡಗಿದವು. ಮೈಸೂರು ಸಂಸ್ಥಾನವು ಆಡಳಿತಾತ್ಮಕವಾಗಿ ಪ್ರಗತಿಪರ ಸಂಸ್ಥಾನವೆಂದು

ಹೆಸರಾದರೂ, ಜನರಿಗೆ ಸಂಪೂರ್ಣ ರಾಜಕೀಯ ಹಕ್ಕುಗಳು ದೊರೆತಿರಲಿಲ್ಲ. ಆಡಳಿತದ ಅಧಿಕಾರವು ಮಹಾರಾಜರು ಮತ್ತು ಉನ್ನತ ಅಧಿಕಾರಿಗಳ ಕೈಯಲ್ಲಿ ಕೇಂದ್ರೀಕೃತವಾಗಿದ್ದ ಕಾರಣ ಜನರಲ್ಲಿ ಜವಾಬ್ದಾರಿಯುತ ಸರ್ಕಾರದ ಸ್ಥಾಪನೆಗೆ ಒತ್ತಾಯ ಹೆಚ್ಚಾಯಿತು. ಈ ಹಿನ್ನೆಲೆಯಲ್ಲಿಯೇ ಮೈಸೂರು ಚಲೋ ಚಳುವಳಿಯು ಉದಯಿಸಿ, ಮೈಸೂರು ರಾಜ್ಯದ ರಾಜಕೀಯ ಇತಿಹಾಸದಲ್ಲಿ ಮಹತ್ವದ ಜನಾಂದೋಲನವಾಗಿ ಗುರುತಿಸಲ್ಪಟ್ಟಿತು. ಮೈಸೂರು ಚಲೋ ಚಳುವಳಿಯು ಮುಖ್ಯವಾಗಿ ಮೈಸೂರು ರಾಜ್ಯ ಕಾಂಗ್ರೆಸ್‌ನ ನೇತೃತ್ವದಲ್ಲಿ ನಡೆದ ಹೋರಾಟವಾಗಿತ್ತು. ಇದರ ಉದ್ದೇಶ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿ, ಜನಪ್ರತಿನಿಧಿಗಳಿಗೆ ಆಡಳಿತದಲ್ಲಿ ಪರಿಣಾಮಕಾರಿ ಪಾತ್ರವನ್ನು ನೀಡುವುದಾಗಿತ್ತು. ಈ ಚಳುವಳಿಯು ಕೇವಲ ರಾಜಕೀಯ ಹೋರಾಟವಾಗಿರದೆ, ಜನರ ಮೂಲಭೂತ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳಿಗಾಗಿ ನಡೆದ ವ್ಯಾಪಕ ಚಳುವಳಿಯಾಗಿತ್ತು. ರಾಷ್ಟ್ರೀಯ ಸ್ವಾತಂತ್ರ್ಯದ ಆಶಯಗಳೊಂದಿಗೆ ಸಂಸ್ಥಾನದಲ್ಲಿ ಜನಪರ ಆಡಳಿತವನ್ನು ಸ್ಥಾಪಿಸುವುದು ಇದರ ಪ್ರಮುಖ ಧ್ಯೇಯವಾಗಿತ್ತು. ಈ ಚಳುವಳಿಯು ಜವಾಬ್ದಾರಿಯುತ ಸರ್ಕಾರದ ಸ್ಥಾಪನೆಯಾಗಿತ್ತು. ಆಡಳಿತವು ಜನಪ್ರತಿನಿಧಿಗಳ ಮುಂದೆ ಉತ್ತರದಾಯಿತ್ವ ಹೊಂದಿರಬೇಕು ಮತ್ತು ಸರ್ಕಾರವು ಜನರ ಇಚ್ಛೆಗೆ ಅನುಗುಣವಾಗಿ ಕಾರ್ಯನಿರ್ವಹಿಸಬೇಕು ಎಂಬ ಬೇಡಿಕೆ ಈ ಹೋರಾಟದ ಕೇಂದ್ರಬಿಂದುವಾಗಿತ್ತು.

ನಾಗರಿಕ ಹಕ್ಕುಗಳ ರಕ್ಷಣೆಗಾಗಿ ಒತ್ತಾಯಿಸಲಾಯಿತು. ಸಭೆ, ಸಂಘಟನೆ, ಅಭಿವ್ಯಕ್ತಿ ಮತ್ತು ಪತ್ರಿಕಾ ಸ್ವಾತಂತ್ರ್ಯಗಳಂತಹ ಮೂಲಭೂತ ಹಕ್ಕುಗಳನ್ನು ಜನರಿಗೆ ಖಚಿತಪಡಿಸಬೇಕು ಎಂಬುದು ಚಳುವಳಿಯ ಪ್ರಮುಖ ಆಶಯವಾಗಿತ್ತು. ಜನಪ್ರತಿನಿಧಿಗಳಿಗೆ ಆಡಳಿತದಲ್ಲಿ ಅವಕಾಶ ನೀಡಬೇಕೆಂಬ ಬೇಡಿಕೆಯನ್ನು ಮುಂದಿಡಲಾಯಿತು. ಮೈಸೂರು ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಜನರಿಂದ ಆಯ್ಕೆಯಾದ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ಮತ್ತು ಜವಾಬ್ದಾರಿಗಳನ್ನು ನೀಡಬೇಕು ಎಂಬ ಅಭಿಪ್ರಾಯವು ವ್ಯಾಪಕ ಬೆಂಬಲವನ್ನು ಪಡೆದಿತು. ಸಂಪೂರ್ಣ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂಬ ಬೇಡಿಕೆ ಚಳುವಳಿಯ ಪ್ರಮುಖ ಗುರಿಯಾಗಿತ್ತು. ಚುನಾಯಿತ ಪ್ರತಿನಿಧಿಗಳ ಮೂಲಕ ಆಡಳಿತ ನಡೆಸುವ ವ್ಯವಸ್ಥೆಯನ್ನು ಸ್ಥಾಪಿಸುವುದರ ಮೂಲಕ ಜನರ ಆಶಯಗಳಿಗೆ ಅನುಗುಣವಾದ ಸರ್ಕಾರವನ್ನು ನಿರ್ಮಿಸಲು ಈ ಚಳುವಳಿ ಪ್ರಯತ್ನಿಸಿತು. ಮೈಸೂರು ಚಲೋ ಚಳುವಳಿಯಲ್ಲಿ ವಿದ್ಯಾರ್ಥಿಗಳು, ಯುವಕರು, ರೈತರು, ಕಾರ್ಮಿಕರು ಹಾಗೂ ವಿವಿಧ ಸಾಮಾಜಿಕ ಸಂಘಟನೆಗಳ ಸದಸ್ಯರು ಸಕ್ರಿಯವಾಗಿ ಭಾಗವಹಿಸಿದರು. ರಾಜ್ಯದ ವಿವಿಧ ಭಾಗಗಳಲ್ಲಿ ಸಾರ್ವಜನಿಕ ಸಭೆಗಳು, ಮೆರವಣಿಗೆಗಳು, ಪ್ರತಿಭಟನೆಗಳು ಮತ್ತು ರಾಜಕೀಯ ಜಾಗೃತಿ ಕಾರ್ಯಕ್ರಮಗಳು ನಡೆದವು.

ಮೈಸೂರು ರಾಜ್ಯದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ 1938ರ ಶಿವಪುರ ಧ್ವಜ ಸತ್ಯಾಗ್ರಹವು ಅತ್ಯಂತ ಮಹತ್ವದ ಘಟನೆಯಾಗಿದೆ. ಈ ಸತ್ಯಾಗ್ರಹವು ಕೇವಲ ರಾಷ್ಟ್ರೀಯ ಧ್ವಜವನ್ನು ಹಾರಿಸುವ ಹಕ್ಕಿಗಾಗಿ ನಡೆದ ಹೋರಾಟವಾಗಿರದೆ, ಪ್ರಜಾಪ್ರಭುತ್ವ, ನಾಗರಿಕ ಹಕ್ಕುಗಳು ಮತ್ತು ರಾಷ್ಟ್ರೀಯ ಸ್ವಾಭಿಮಾನದ ಪ್ರತೀಕವಾಗಿ ರೂಪುಗೊಂಡ ಚಳುವಳಿಯಾಗಿದೆ. ಮೈಸೂರು ಸಂಸ್ಥಾನದಲ್ಲಿ ಬೆಳೆಯುತ್ತಿದ್ದ ರಾಷ್ಟ್ರೀಯ ಚೇತನೆಯು ಈ ಸತ್ಯಾಗ್ರಹದ ಮೂಲಕ ಹೊಸ ರೂಪವನ್ನು ಪಡೆದುಕೊಂಡಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಭಾವ ಮತ್ತು ಸ್ವಾತಂತ್ರ್ಯ ಚಳುವಳಿಯ ಅಲೆ ಮೈಸೂರು ರಾಜ್ಯದ ಜನರಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಬಲಪಡಿಸುತ್ತಿದ್ದ ಸಂದರ್ಭದಲ್ಲಿ ಈ ಘಟನೆ ನಡೆಯಿತು. 1938ರಲ್ಲಿ ಮಂಡ್ಯ ಜಿಲ್ಲೆಯ ಶಿವಪುರ ಗ್ರಾಮದಲ್ಲಿ ರಾಷ್ಟ್ರೀಯ ತ್ರಿವರ್ಣ ಧ್ವಜವನ್ನು ಹಾರಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಆದರೆ ಮೈಸೂರು ಸರ್ಕಾರವು ರಾಷ್ಟ್ರೀಯ ಧ್ವಜದ ಪ್ರದರ್ಶನ ಮತ್ತು ಧ್ವಜಾರೋಹಣ ಕಾರ್ಯಕ್ರಮಗಳ ಮೇಲೆ ನಿರ್ಬಂಧ ಹೇರಿತ್ತು. ಸರ್ಕಾರದ ಈ ಕ್ರಮವನ್ನು ಜನರು ತಮ್ಮ ನಾಗರಿಕ ಹಕ್ಕುಗಳು ಮತ್ತು ರಾಷ್ಟ್ರೀಯ ಗೌರವದ ಮೇಲಿನ ನಿರ್ಬಂಧವೆಂದು ಪರಿಗಣಿಸಿದರು. ಇದರ ವಿರುದ್ಧವಾಗಿ ಮೈಸೂರು ರಾಜ್ಯ ಕಾಂಗ್ರೆಸ್‌ನ ನೇತೃತ್ವದಲ್ಲಿ ಜನರು ಸಂಘಟಿತರಾಗಿ ಪ್ರತಿಭಟನೆಯನ್ನು ಆರಂಭಿಸಿದರು.

ಶಿವಪುರದಲ್ಲಿ ವಿದ್ಯಾರ್ಥಿಗಳು, ಯುವಕರು, ರೈತರು, ಮಹಿಳೆಯರು ಮತ್ತು ವಿವಿಧ ಸಾಮಾಜಿಕ ಸಂಘಟನೆಗಳ ಕಾರ್ಯಕರ್ತರು ಸಾವಿರಾರು ಜನರು ಸೇರಿ ರಾಷ್ಟ್ರೀಯ ಧ್ವಜವನ್ನು ಹಾರಿಸುವ ಮೂಲಕ ಸರ್ಕಾರದ ಆದೇಶವನ್ನು ಅಹಿಂಸಾತ್ಮಕವಾಗಿ ವಿರೋಧಿಸಿದರು. ಈ ಧ್ವಜಾರೋಹಣವನ್ನು ತಡೆಯಲು ಸರ್ಕಾರ ಪೊಲೀಸ್ ಪಡೆಗಳನ್ನು ನಿಯೋಜಿಸುವ ಮೂಲಕ ಸರ್ಕಾರವು ಸತ್ಯಾಗ್ರಹವನ್ನು ಹತ್ತಿಕ್ಕಲು ಹಲವಾರು ಕ್ರಮಗಳನ್ನು ಕೈಗೊಂಡಿತು. ಅನೇಕ ಕಾರ್ಯಕರ್ತರನ್ನು ಬಂಧಿಸಲಾಯಿತು ಹಾಗೂ ಕೆಲವು ಕಡೆಗಳಲ್ಲಿ ಪ್ರತಿಭಟನಾಕಾರರ ವಿರುದ್ಧ ಕಠಿಣ ಕ್ರಮಗಳನ್ನು ಜಾರಿಗೊಳಿಸಲಾಯಿತು. ಆದರೂ ಜನರ ಹೋರಾಟದ ಮನೋಭಾವ ಕುಗ್ಗಲಿಲ್ಲ. ಬಂಧನಗಳು ಮತ್ತು ದಮನಕಾರಿ ಕ್ರಮಗಳು ಜನರಲ್ಲಿ ಇನ್ನಷ್ಟು ರಾಷ್ಟ್ರೀಯತೆಯ ಭಾವನೆಯನ್ನು ಉಂಟುಮಾಡಿದವು. ಇದರಿಂದ ಶಿವಪುರ ಧ್ವಜ ಸತ್ಯಾಗ್ರಹವು ಮೈಸೂರು ರಾಜ್ಯದಾದ್ಯಂತ ರಾಷ್ಟ್ರೀಯ ಚರ್ಚೆಯ ವಿಷಯವಾಗಿ ಮಾರ್ಪಟ್ಟಿತು.

ಮೈಸೂರು ರಾಜ್ಯದ ಸ್ವಾತಂತ್ರ್ಯ ಚಳುವಳಿಯು ಕೇವಲ ಜನಾಂದೋಲನಗಳ ಮೂಲಕ ಮಾತ್ರವಲ್ಲದೆ, ಸಮರ್ಥ ನಾಯಕತ್ವದ ಮೂಲಕವೂ ಯಶಸ್ಸಿನತ್ತ ಸಾಗಿತು. ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯ ಚೇತನೆಯನ್ನು ಬೆಳೆಸುವುದು, ಜನರನ್ನು ಸಂಘಟಿಸುವುದು, ಜವಾಬ್ದಾರಿಯುತ ಸರ್ಕಾರಕ್ಕಾಗಿ ಹೋರಾಟ ನಡೆಸುವುದು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸ್ಥಾಪಿಸುವಲ್ಲಿ ಕೆ.ಸಿ.ರೆಡ್ಡಿ,

ಟಿ.ಸಿದ್ದಲಿಂಗಯ್ಯ, ಎಚ್.ಸಿ.ದಾಸಪ್ಪ ಮತ್ತು ಕೆಂಗಲ್ ಹನುಮಂತಯ್ಯ ಅವರಂತಹ ನಾಯಕರು ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ.

ಕೆ.ಸಿ.ರೆಡ್ಡಿ ಅವರು ಮೈಸೂರು ರಾಜ್ಯದ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ನಾಯಕರಲ್ಲಿ ಒಬ್ಬರಾಗಿ ಮೈಸೂರು ರಾಜ್ಯ ಕಾಂಗ್ರೆಸ್‌ನ ಸಂಘಟನೆಯನ್ನು ಬಲಪಡಿಸುವಲ್ಲಿ ಮತ್ತು ಜನರಲ್ಲಿ ರಾಜಕೀಯ ಜಾಗೃತಿಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿಯುತ ಸರ್ಕಾರದ ಸ್ಥಾಪನೆಗಾಗಿ ಅವರು ನಿರಂತರ ಹೋರಾಟ ನಡೆಸಿದರು. ಜನಪ್ರತಿನಿಧಿತ್ವ, ನಾಗರಿಕ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಪರವಾಗಿ ಅವರು ಬಲವಾಗಿ ಧ್ವನಿಯೆತ್ತಿದರು. ಕೆ.ಸಿ.ರೆಡ್ಡಿ ಅವರ ನಾಯಕತ್ವವು ಮೈಸೂರು ಕಾಂಗ್ರೆಸ್‌ಗೆ ಜನಬೆಂಬಲವನ್ನು ಹೆಚ್ಚಿಸಿತು. ಸ್ವಾತಂತ್ರ್ಯಾನಂತರ 1947ರಲ್ಲಿ ಅವರು ಮೈಸೂರು ರಾಜ್ಯದ ಮೊಟ್ಟಮೊದಲ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಜನತಾಂತ್ರಿಕ ಆಡಳಿತ ವ್ಯವಸ್ಥೆಯ ಸ್ಥಾಪನೆಗೆ ಮಹತ್ವದ ಕೊಡುಗೆ ನೀಡಿದರು.

ಟಿ.ಸಿದ್ದಲಿಂಗಯ್ಯ ಅವರು ಮೈಸೂರು ರಾಜ್ಯ ಕಾಂಗ್ರೆಸ್‌ನ ಪ್ರಮುಖ ನಾಯಕರಾಗಿದ್ದು, ಜನರ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಿದರು. ಅವರು ರಾಷ್ಟ್ರೀಯ ಚಳುವಳಿಯ ತತ್ವಗಳನ್ನು ಜನರಿಗೆ ತಲುಪಿಸುವಲ್ಲಿ ಹಾಗೂ ಮೈಸೂರು ರಾಜ್ಯದಲ್ಲಿ ರಾಜಕೀಯ ಚೇತನೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸಿದರು. ಸಾರ್ವಜನಿಕ ಸಭೆಗಳು, ರಾಜಕೀಯ ಜಾಗೃತಿ ಕಾರ್ಯಕ್ರಮಗಳು ಮತ್ತು ಸಂಘಟನಾ ಚಟುವಟಿಕೆಗಳ ಮೂಲಕ ಜನರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದರು. ಅವರು ವಿಶೇಷವಾಗಿ ನಾಗರಿಕ ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ಮತ್ತು ಜನಪ್ರತಿನಿಧಿತ್ವದ ಪರವಾಗಿ ಕಾರ್ಯನಿರ್ವಹಿಸಿದರು. ಮೈಸೂರು ರಾಜ್ಯದಲ್ಲಿ ಜನಪರ ಆಡಳಿತ ವ್ಯವಸ್ಥೆಯ ಸ್ಥಾಪನೆಗಾಗಿ ನಡೆದ ಹೋರಾಟಗಳಲ್ಲಿ ಅವರ ಪಾತ್ರ ಗಮನಾರ್ಹವಾಗಿದೆ.

ಎಚ್.ಸಿ.ದಾಸಪ್ಪ ಅವರು ಮೈಸೂರು ರಾಜ್ಯದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜಕೀಯ ನಾಯಕರಾಗಿದ್ದರು. ಅವರು ರಾಷ್ಟ್ರೀಯ ಚಳುವಳಿಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಮೈಸೂರು ರಾಜ್ಯದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳ ಪ್ರಸಾರಕ್ಕೆ ಶ್ರಮಿಸಿದರು. ಜವಾಬ್ದಾರಿಯುತ ಸರ್ಕಾರದ ಸ್ಥಾಪನೆ, ನಾಗರಿಕ ಹಕ್ಕುಗಳ ರಕ್ಷಣೆ ಮತ್ತು ಜನಪರ ಆಡಳಿತಕ್ಕಾಗಿ ನಡೆದ ಚಳುವಳಿಗಳಲ್ಲಿ ಅವರು ಪ್ರಮುಖ ಪಾತ್ರವಹಿಸಿದರು. ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಅವರು ಜನರಲ್ಲಿ ರಾಷ್ಟ್ರಪ್ರೇಮ ಮತ್ತು ರಾಜಕೀಯ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಸ್ವಾತಂತ್ರ್ಯಾನಂತರವೂ ಅವರು ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿ ರಾಜ್ಯ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡಿದರು.

ಕೆಂಗಲ್ ಹನುಮಂತಯ್ಯ ಅವರು ಮೈಸೂರು ರಾಜ್ಯದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರಾಗಿ; ರಾಷ್ಟ್ರೀಯ ಚಳುವಳಿಯ ಆಶಯಗಳನ್ನು ಜನರಿಗೆ ತಲುಪಿಸುವುದರ ಜೊತೆಗೆ

ಮೈಸೂರು ಕಾಂಗ್ರೆಸ್‌ನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆಯ ಸ್ಥಾಪನೆ ಮತ್ತು ಜನರ ಹಕ್ಕುಗಳ ರಕ್ಷಣೆಗಾಗಿ ನಡೆದ ಹೋರಾಟಗಳಲ್ಲಿ ಅವರು ಪ್ರಮುಖ ಪಾತ್ರವಹಿಸಿದರು. ಸ್ವಾತಂತ್ರ್ಯಾನಂತರ ಅವರು ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿ ರಾಜ್ಯದ ಆಧುನಿಕ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದರು.

ಮೈಸೂರು ರಾಜ್ಯದಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳು ರಾಷ್ಟ್ರೀಯ ಚಳುವಳಿಯ ಆಶಯಗಳನ್ನು ಜನರಿಗೆ ಪರಿಚಯಿಸಿದವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಚಟುವಟಿಕೆಗಳು, ಮಹಾತ್ಮ ಗಾಂಧೀಜಿ ಅವರ ಸಂದೇಶಗಳು, ಸ್ವದೇಶಿ ಚಳುವಳಿಯ ಉದ್ದೇಶಗಳು ಮತ್ತು ಸ್ವಾತಂತ್ರ್ಯ ಹೋರಾಟದ ಬೆಳವಣಿಗೆಗಳ ಕುರಿತು ನಿರಂತರವಾಗಿ ಲೇಖನಗಳು ಹಾಗೂ ವರದಿಗಳನ್ನು ಪ್ರಕಟಿಸುತ್ತಿದ್ದವು. ಈ ಮೂಲಕ ಜನರಲ್ಲಿ ರಾಷ್ಟ್ರಪ್ರೇಮ, ಸ್ವಾಭಿಮಾನ ಮತ್ತು ರಾಜಕೀಯ ಜಾಗೃತಿ ಹೆಚ್ಚಾಯಿತು. ವೃತ್ತಾಂತ ಪತ್ರಿಕೆಯು ಮೈಸೂರು ರಾಜ್ಯದ ಪ್ರಮುಖ ಕನ್ನಡ ಪತ್ರಿಕೆಗಳಲ್ಲಿ ಒಂದಾಗಿದ್ದು, ರಾಷ್ಟ್ರೀಯ ಚಿಂತನೆಗಳ ಪ್ರಸಾರಕ್ಕೆ ವೇದಿಕೆಯಾಗಿತ್ತು. ಈ ಪತ್ರಿಕೆಯು ದೇಶದ ರಾಜಕೀಯ ಬೆಳವಣಿಗೆಗಳು, ಸ್ವಾತಂತ್ರ್ಯ ಹೋರಾಟದ ಘಟನೆಗಳು ಹಾಗೂ ರಾಷ್ಟ್ರೀಯ ನಾಯಕರ ವಿಚಾರಧಾರೆಗಳನ್ನು ಜನರಿಗೆ ತಲುಪಿಸಿತು. ಸಾರ್ವಜನಿಕ ಜೀವನದಲ್ಲಿ ರಾಜಕೀಯ ಅರಿವು ಮೂಡಿಸುವಲ್ಲಿ ಇದರ ಪಾತ್ರ ಗಮನಾರ್ಹವಾಗಿದೆ. ತಾಯಿನಾಡು ಪತ್ರಿಕೆಯು ರಾಷ್ಟ್ರೀಯತೆಯ ಭಾವನೆಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಸ್ವರಾಜ್ಯ, ಸ್ವದೇಶಿ ಮತ್ತು ಸಾಮಾಜಿಕ ಸುಧಾರಣೆಗಳ ಕುರಿತ ಲೇಖನಗಳ ಮೂಲಕ ಜನರಲ್ಲಿ ರಾಷ್ಟ್ರೀಯ ಚೇತನೆಯನ್ನು ಬೆಳೆಸಲು ಪ್ರಯತ್ನಿಸಿತು.

ಮೈಸೂರು ರಾಜ್ಯದಲ್ಲಿ ಜನರ ರಾಜಕೀಯ ಹಕ್ಕುಗಳು ಮತ್ತು ಜವಾಬ್ದಾರಿಯುತ ಸರ್ಕಾರದ ಅಗತ್ಯತೆಯ ಬಗ್ಗೆ ಜನಾಭಿಪ್ರಾಯವನ್ನು ರೂಪಿಸುವಲ್ಲಿ ಈ ಪತ್ರಿಕೆಯು ಮಹತ್ವದ ಕೊಡುಗೆ ನೀಡಿತು. ಪ್ರಜಾಮಾತ ಪತ್ರಿಕೆಯು ಮೈಸೂರು ರಾಜ್ಯದಲ್ಲಿ ಜನಪರ ಚಿಂತನೆಗಳನ್ನು ಉತ್ತೇಜಿಸಿದ ಪ್ರಮುಖ ಪತ್ರಿಕೆಗಳಲ್ಲಿ ಒಂದಾಗಿತ್ತು. ಇದು ಪ್ರಜಾಪ್ರಭುತ್ವ, ನಾಗರಿಕ ಹಕ್ಕುಗಳು ಮತ್ತು ಜನಪ್ರತಿನಿಧಿತ್ವದ ಪರವಾಗಿ ನಿರಂತರವಾಗಿ ಧ್ವನಿಯೆತ್ತಿತು. ಮೈಸೂರು ಕಾಂಗ್ರೆಸ್‌ನ ಚಟುವಟಿಕೆಗಳು ಮತ್ತು ರಾಷ್ಟ್ರೀಯ ಚಳುವಳಿಯ ಬೆಳವಣಿಗೆಗಳನ್ನು ಜನರಿಗೆ ತಲುಪಿಸುವಲ್ಲಿ ಈ ಪತ್ರಿಕೆಯು ಪ್ರಮುಖ ಮಾಧ್ಯಮವಾಗಿತ್ತು. ಪತ್ರಿಕೆಗಳು ಕೇವಲ ಸುದ್ದಿಗಳನ್ನು ನೀಡುವ ಮಾಧ್ಯಮಗಳಾಗಿರದೆ, ರಾಷ್ಟ್ರೀಯ ಶಿಕ್ಷಣದ ಸಾಧನಗಳಾಗಿಯೂ ಕಾರ್ಯನಿರ್ವಹಿಸಿದವು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ರಾಜಕೀಯ ಅರಿವು ಮೂಡಿಸಲು ಅವು ನೆರವಾದವು. ಸ್ವಾತಂತ್ರ್ಯ, ಸ್ವರಾಜ್ಯ, ನಾಗರಿಕ ಹಕ್ಕುಗಳು, ರಾಷ್ಟ್ರೀಯ ಏಕತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಜನರಿಗೆ ಮಾಹಿತಿ ನೀಡುವ ಮೂಲಕ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿದವು.

**ಉಪಸಂಹಾರ**

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ತತ್ವಗಳು, ಮಹಾತ್ಮ ಗಾಂಧೀಜಿ ಅವರ ರಾಷ್ಟ್ರೀಯ ಚಳುವಳಿಗಳು ಹಾಗೂ ಸ್ವದೇಶಿ ಮತ್ತು ಖಾದಿ ಚಳುವಳಿಗಳ ಪ್ರಭಾವದಿಂದ ಮೈಸೂರು ರಾಜ್ಯದ ಜನರಲ್ಲಿ ರಾಷ್ಟ್ರಪ್ರೇಮ ಮತ್ತು ರಾಜಕೀಯ ಜಾಗೃತಿ ವೃದ್ಧಿಯಾಯಿತು. ಈ ಜಾಗೃತಿಯು ಜನರನ್ನು ಸ್ವಾತಂತ್ರ್ಯ, ಸ್ವರಾಜ್ಯ ಮತ್ತು ಜವಾಬ್ದಾರಿಯುತ ಆಡಳಿತಕ್ಕಾಗಿ ಸಂಘಟಿತ ಹೋರಾಟದತ್ತ ಕೊಂಡೊಯ್ದಿತು. ಮೈಸೂರು ಕಾಂಗ್ರೆಸ್‌ನ ಸ್ಥಾಪನೆಯು ರಾಜ್ಯದ ರಾಜಕೀಯ ಚಳುವಳಿಗೆ ಸಂಘಟಿತ ರೂಪವನ್ನು ನೀಡಿತು. ಜವಾಬ್ದಾರಿಯುತ ಸರ್ಕಾರ, ನಾಗರಿಕ ಹಕ್ಕುಗಳ ರಕ್ಷಣೆ ಮತ್ತು ಜನಪ್ರತಿನಿಧಿತ್ವದ ಬೇಡಿಕೆಗಳನ್ನು ಮುಂದಿರಿಸಿ ಮೈಸೂರು ಕಾಂಗ್ರೆಸ್ ಜನರ ಧ್ವನಿಯಾಗಿ ಕಾರ್ಯನಿರ್ವಹಿಸಿತು. ಅಸಹಕಾರ ಚಳುವಳಿ, ನಾಗರಿಕ ಕಾಯಿದೆ ಭಂಗ ಚಳುವಳಿ ಮತ್ತು ರಾಷ್ಟ್ರೀಯ ಹೋರಾಟಗಳ ಪ್ರಭಾವದಿಂದ ಮೈಸೂರು ರಾಜ್ಯದಲ್ಲಿ ರಾಷ್ಟ್ರೀಯತೆಯ ಭಾವನೆ ಇನ್ನಷ್ಟು ಗಟ್ಟಿಗೊಂಡಿತು. 1938ರ ಶಿವಪುರ ಧ್ವಜ ಸತ್ಯಾಗ್ರಹವು ರಾಷ್ಟ್ರೀಯ ಗೌರವ ಮತ್ತು ನಾಗರಿಕ ಹಕ್ಕುಗಳ ರಕ್ಷಣೆಯ ಸಂಕೇತವಾಗಿ ಹೊರಹೊಮ್ಮಿದರೆ, ಮೈಸೂರು ಚಲೋ ಚಳುವಳಿಯು ಪ್ರಜಾಪ್ರಭುತ್ವ ಮತ್ತು ಜವಾಬ್ದಾರಿಯುತ ಆಡಳಿತಕ್ಕಾಗಿ ನಡೆದ ಮಹತ್ವದ ಜನಾಂದೋಲನವಾಗಿ ಗುರುತಿಸಲ್ಪಟ್ಟಿತು. ಕೆ.ಸಿ.ರೆಡ್ಡಿ, ಟಿ.ಸಿದ್ದಲಿಂಗಯ್ಯ, ಎಚ್.ಸಿ.ದಾಸಪ್ಪ, ಕೆಂಗಲ್ ಹನುಮಂತಯ್ಯ ಅವರಂತಹ ಜನನಾಯಕರು ಮೈಸೂರು ರಾಜ್ಯದ ಜನರಲ್ಲಿ ರಾಜಕೀಯ ಅರಿವು ಮೂಡಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಪರಿಣಾಮಕಾರಿ ನಾಯಕತ್ವ ನೀಡಿದರು. ಇದರ ಜೊತೆಗೆ ಕನ್ನಡ ಪತ್ರಿಕೆಗಳು, ಸಾಹಿತ್ಯಿಕರು, ಶಿಕ್ಷಣ ಸಂಸ್ಥೆಗಳು, ಮಹಿಳಾ ಸಂಘಟನೆಗಳು ಮತ್ತು ಸಾಮಾಜಿಕ ಸುಧಾರಣಾ ಚಳುವಳಿಗಳು ರಾಷ್ಟ್ರೀಯ ಚೇತನೆಯನ್ನು ಜನಸಾಮಾನ್ಯರ ನಡುವೆ ಹರಡುವಲ್ಲಿ ಮಹತ್ವದ ಪಾತ್ರ ವಹಿಸಿದವು.

**ಪರಾಮರ್ಶನ ಗ್ರಂಥಗಳು**


1. ಎಂ.ಚಿದಾನಂದಮೂರ್ತಿ, ಕರ್ನಾಟಕದ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1985.
2. ಸೂರ್ಯನಾಥ ಯು. ಕಾಮತ್, ಕರ್ನಾಟಕ ಇತಿಹಾಸ ದರ್ಶನ (ಭಾಗ–2), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2001.
3. ಬಿ.ಶೇಖ್ ಅಲಿ, ಆಧುನಿಕ ಕರ್ನಾಟಕದ ಇತಿಹಾಸ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1998.
4. ಕೆ.ಎಂ.ಶ್ರೀಕಂಠಯ್ಯ(ಸಂ.),ಕರ್ನಾಟಕದ ಇತಿಹಾಸ,ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು, 1972.
5. ಎಚ್.ಎಸ್.ಗೋಪಾಲ್‌ರಾವ್,ಮೈಸೂರು ಸಂಸ್ಥಾನದ ಇತಿಹಾಸ,ಸಪ್ನ ಬುಕ್ ಹೌಸ್,ಬೆಂಗಳೂರು,1995.
6. ಜಿ.ವೆಂಕಟಸುಬ್ಬಯ್ಯ,ಕರ್ನಾಟಕದ ರಾಷ್ಟ್ರೀಯ ಚಳುವಳಿ, ವಸಂತ ಪ್ರಕಾಶನ, ಬೆಂಗಳೂರು, 1987.
7. ಎಂ.ವಿ.ಕೃಷ್ಣರಾವ್,ಮೈಸೂರು ರಾಜ್ಯದಲ್ಲಿ ಸ್ವಾತಂತ್ರ್ಯ ಚಳುವಳಿ, ಗೀತಾ ಬುಕ್ ಹೌಸ್, ಮೈಸೂರು, 1992.
8. ಆರ್.ನರಸಿಂಹಾಚಾರ್,ಕರ್ನಾಟಕದ ಸಾಂಸ್ಕೃತಿಕ ಇತಿಹಾಸ,ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು,1970.
9. ಎಚ್.ಎಲ್.ನಾಗೇಗೌಡ, ಕರ್ನಾಟಕ ಏಕೀಕರಣ ಮತ್ತು ರಾಷ್ಟ್ರೀಯ ಚಳುವಳಿ, ಸಮಾಜ ಪುಸ್ತಕಾಲಯ, ಬೆಂಗಳೂರು, 2003.
10. ಕೆಂಗಲ್‌ಹನುಮಂತಯ್ಯ, ನನ್ನ ರಾಜಕೀಯ ಜೀವನ ಮತ್ತು ನೆನಪುಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, 1979.